# ರಾಷ್ಟ್ರಕವಿಯ ಸ್ಫೂರ್ತಿಯ ಬೀಡು ಕುಪ್ಪಳ್ಳಿ





» ಸುಷ್ಮಾ ಪವಾರ
yatra@vishwavani.news

'ಪುಟ್ಟದೊಂದು ಮನೆ ಇರಲಿ, ಮನೆ ಮುಂದೊಂದು ಕಾರಿರಲಿ, ಹೆಚ್ಚು ಭರಿಸಲು ಬಾಡಿಗೆ ಬರಲಿ, ಬೇಕಿದ್ದ ಓದಿಯೂ ಬೇರೆ ಇರಲಿ' ಆಶ್ಚರ್ಯವೆಂದರೂ ಇದು ಇಂದಿನ ಒತ್ತಡದ ಬದುಕಿನ ಕಟು ಸತ್ಯ. ಕೇವಲ ಯುವ ಜನತೆಯನ್ನು ಮಾತ್ರ ಟೀಕಿಸುವುದು ಸಲ್ಲ, ಬದುಕಿಗೆ ಬೇಕಾದ ಅಗತ್ಯ ತಿಳುವಳಿಕೆ ನೀಡುವಲ್ಲಿ ವಿಫಲರಾದ ಹಿರಿಯರು ಕೂಡ ಇದರಲ್ಲಿ ಭಾಗಿ. ಕುವೆಂಪುರವರ ಕುಪ್ಪಳಿಯ ಮನೆಯ ಸುತ್ತ ಹೊರಟ ನಮ್ಮ ತಲೆಯ ಹೊಕ್ಕ ಹಲವಾರು ವಿಚಾರಗಳಲ್ಲಿ ಮೇಲಿನದ್ದು ಕೂಡ ಒಂದು.

ಕುಪ್ಪಳ್ಳಿಯಲ್ಲಿ ಹುಟ್ಟಿ ಮೈಸೂರಿನಲ್ಲಿ ನಿಂತು ಅಲ್ಲಿಂದ ವಿಶ್ವಕ್ಕೆ ವಿಶ್ವಮಾನವ ಸಂದೇಶ ಕೊಟ್ಟ ಕುವೆಂಪುರವರ ಮನೆ ಇಂದು ಪ್ರವಾಸಿತಾಣ. ಅತ್ಯುತ್ತಮ ಕೃತಿಗಳನ್ನು ಕೊಟ್ಟು, ಓದುಗರು ಬಾಳಿ ಬದುಕಿದ ಮನೆಯನ್ನು ಬಿಟ್ಟು, ಬದುಕಿನ ಅರ್ಥವನ್ನು ತಿಳಿಸಿಕೊಟ್ಟು ಅಮರರಾದ ಕವಿ ಕುವೆಂಪುರವರ ಮನೆ ಇಂದಿನ ಆಧುನಿಕ ಮನೆಯಂತೆ ಅಲ್ಲ, ಕವಿ ಮನೆಯ ಅಡುಗೆ ಮನೆ, ಸ್ನಾನದ ಕೋಣೆಯಿಂದ ಹಿಡಿದು ಮಲಗುವ ಕೋಣೆಯ ತನಕ ಎಲ್ಲೆಲ್ಲೂ ಎಲ್ಲವೂ ವೈಶಿಷ್ಟ್ಯಪೂರ್ಣ ವಸ್ತುಗಳು. ಕುವೆಂಪು ಉಪಯೋಗಿಸಿದ ವಸ್ತುಗಳು, ಅವರ ಎಲ್ಲಾ ಡಾಕ್ಟರೇಟ್ ಪದವಿಗಳು, ಅವರ ಮದುವೆಯ ಕರೆಯೋಲೆ, ತುಂಬು ಕುಟುಂಬದ ಚಿತ್ರಗಳು, ಕುಲಪತಿಯಾಗಿ ಕುವೆಂಪು, ಅಜ್ಜನಾಗಿ ಕುವೆಂಪು ಹೀಗೆ ಹಲವು ಬಗೆಯ ವಿಚಾರಗಳು ನಮಗೆ ನೋಡ ಸಿಗುತ್ತವೆ. ಇನ್ನು ಕಲಾನಿಕೇತನದಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಛಾಯಾಚಿತ್ರಗಳು ಗಮನಸೆಳೆಯುತ್ತವೆ.

ಸಹ್ಯಾದ್ರಿಯ ಮಡಿಲಲ್ಲೊಂದು ಸಾಹಿತ್ಯದ ಬೀಡು. ಶತಮಾನದ ಹಿಂದಿನ ಜೀವನಶೈಲಿಯ ಕುರುಹು. ಸುತ್ತವರಿದ ಹಸಿರಿನ ಮಧ್ಯೆ ಕೆಂಪು ಹೆಂಚಿನ ಮನೆ. ಅದೆಷ್ಟೋ ಜನಮೆಚ್ಚುಗೆ ಪಡೆದು ಇತಿಹಾಸ ಸೃಷ್ಟಿಸಿದ ಕವನ, ನಾಟಕಗಳು ಮೂಡಿದ ಸ್ಫೂರ್ತಿ ಸ್ಥಳ. ಇವೆಲ್ಲ ಕೇವಲ ಪಠ್ಯದ ಸಾಲುಗಳಲ್ಲ, ಕವಿ ಮನೆಯ ಸುತ್ತ ಕಂಡುಬರುವ ದೃಶ್ಯಾವಳಿಗಳು. ರಾಷ್ಟ್ರಕವಿ ಕುವೆಂಪು ಅವರ ಜನನವಾಗಿದ್ದು ಈ ಪ್ರಕೃತಿ ಸೌಂದರ್ಯದ ಮಧ್ಯೆಯೇ. ರಾಷ್ಟ್ರಕವಿ ಆಗಿ ಮನ್ನಣೆ ಪಡೆಯಲು ಸ್ಫೂರ್ತಿಯಾಗಿದ್ದು ಇಲ್ಲಿನ ಪರಿಸರವೇ.

ಶಿವಮೊಗ್ಗ ಜಿಲ್ಲೆಯ ಈ ಕುಪ್ಪಳ್ಳಿ ಎಂಬ ಗ್ರಾಮ, ಕುವೆಂಪು ಅವರಂತಹ ಕವಿಯನ್ನು ನಾಡಿಗೆ ಕೊಡುಗೆಯಾಗಿ ನೀಡಿದೆ. ಈಗ ಈ ಕವಿಯ ಮನೆ ಕುವೆಂಪು ವಿಚಾರಧಾರೆ, ಸರಳ ಜೀವನಶೈಲಿಗೆ ಉದಾಹರಣೆಯಾಗಿದೆ, ಜತೆಗೆ ದೇಶ ವಿದೇಶದ [illegible] ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. 'ಕವಿಮನೆ ಕುಪ್ಪಳ್ಳಿಯ ಕುರಿತು ಒಂದಿಷ್ಟು ಮಾಹಿತಿ ಇಲ್ಲಿದೆ ನೋಡಿ.

ಶಿವಮೊಗ್ಗ ಜಿಲ್ಲೆಯ, ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ ಎಂಬ ಗ್ರಾಮವೇ ಕುವೆಂಪು ಹುಟ್ಟಿದ ಸ್ಥಳ. ಈ ಸ್ಥಳಕ್ಕೆ ತಲುಪಲು ಶಿವಮೊಗ್ಗದಿಂದ ಸುಮಾರು 80 ಕಿಮೀ ಪ್ರಯಾಣಿಸಬೇಕಾಗುತ್ತದೆ. ಅಲ್ಲಿ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ವತಿಯಿಂದ ಕುವೆಂಪು ಅವರ ಮನೆ, ಅವರ ವಸ್ತುಗಳನ್ನು



ಮ್ಯೂಸಿಯಮ್? ರೀತಿಯಲ್ಲಿ ನಿರ್ಮಾಣ ಮಾಡಿ ಸುರಕ್ಷಿತವಾಗಿ ಇಡಲಾಗಿದೆ.

ಕವಿಮನೆ ಶತಮಾನದ ಹಿಂದಿನ ಜೀವನಶೈಲಿಗೆ ಉದಾಹರಣೆ ಎನ್ನಬಹುದು. ಆಗ ಬಳಸಲಾಗುತ್ತಿದ್ದ ಪಾತ್ರೆಗಳು, ಕುವೆಂಪು ಅವರ ಕೋಟ್, ತೂಗು ಉಯ್ಯಾಲೆ, ಕುವೆಂಪು ಅವರ ಮದುವೆ ಮಂಟಪ, ಹಳೆಯ ಫೋಟೊಗಳು, ಪುಸ್ತಕಗಳು, ಪುರಸ್ಕಾರಗಳು, ಎಲ್ಲವನ್ನೂ ಸಂರಕ್ಷಿಸಿ ಇಡಲಾಗಿದೆ. ಮಲೆನಾಡು ಮಾದರಿಯ ಈ ಮನೆಯೊಳಗೆ ನಡೆದಾಡಿದರೆ ಹಳೆಯ ಕಾಲದ ಜೀವನ ಪದ್ಧತಿಯು ಕಣ್ಣಿನ ಎದುರೇ ಬಂದಂತೆ ಭಾಸವಾಗುತ್ತದೆ. ಎರಡು ಅಂತಸ್ತಿನ ಈ ಹಂಚಿನ ಮನೆಯ ಕಿಟಕಿಗಳಿಂದ ನೋಡಿದರೆ, ದೂರದವರೆಗಿನ ಬೆಟ್ಟ, ತೆಂಗು ಅಡಿಕೆ ತೋಟಗಳು ಕಾಣಲು ಸಿಗುತ್ತವೆ.

## ಕವಿಶೈಲ

ಕುವೆಂಪು ಅವರ ಮನೆಯ ಬಳಿಯೇ ಕವಿಶೈಲ ಎಂಬ ಸ್ಮಾರಕವಿದೆ. ಇಂಗ್ಲ್ಯಾಂಡ್‌ನ ಸ್ಟೋನ್‌ಹೆಂಜ್ ಮಾದರಿಯಲ್ಲಿ ಈ ಸ್ಮಾರಕವನ್ನು ನಿರ್ಮಿಸಲಾಗಿದ್ದು ವೃತ್ತಾಕಾರದಲ್ಲಿ ದೊಡ್ಡ ಕಲ್ಲುಗಳನ್ನು ಇರಿಸಿ ಮಧ್ಯದಲ್ಲಿ ಕುವೆಂಪು ಅವರ ಸಮಾಧಿಯನ್ನು ನಿರ್ಮಿಸಲಾಗಿದೆ. ಸಂಜೆಯ ಸಮಯದಲ್ಲಿ ಇಲ್ಲಿ ತಂಪಾದ ಗಾಳಿ ಸಿಗುವುದರಿಂದ ಒಂದು ಒಳ್ಳೆಯ ವಿಹಾರಕ್ಕೆ ಚೆನ್ನಾಗಿದೆ.'

## ಸ್ಮಾರಕ ಭವನ

ಕುಪ್ಪಳ್ಳಿಯಲ್ಲೇ ಸ್ಮಾರಕಭವನವನ್ನು ನಿರ್ಮಿಸಲಾಗಿದೆ. ಈ ಭವನದ ಪಕ್ಕದಲ್ಲಿ ಕುವೆಂಪು ಅವರ ಪುತ್ರ ಪೂರ್ಣಚಂದ್ರ ತೇಜಸ್ವಿ ಅವರ ಸಮಾಧಿ ಇದೆ. ಸ್ಮಾರಕ ಭವನದಲ್ಲಿ ಕವಿಗೋಷ್ಠಿ, ವಿಚಾರಗೋಷ್ಠಿಗಳನ್ನು ಆಯೋಜಿಸಲಾಗುತ್ತದೆ. ಇಲ್ಲಿ ಪೂರ್ಣಚಂದ್ರ ತೇಜಸ್ವಿ ಅವರು ಕ್ಲಿಕ್ಕಿಸಿದ ಫೋಟೋ, ಪೇಂಟಿಂಗ್, ಜತೆಗೆ ಕುವೆಂಪು ಕುಟುಂಬದವರ ಭಾವಚಿತ್ರಗಳನ್ನು ಇರಿಸಲಾಗಿದೆ. ಇಲ್ಲಿ ಒಮ್ಮೆ ಭೇಟಿ ನೀಡಿದರೆ ಕುವೆಂಪು ಕುಟುಂಬದ ಸಂಪೂರ್ಣ ಪರಿಚಯ ಸಿಗುತ್ತದೆ.

## ನವಿಲುಕಲ್ಲು

ಕುಪ್ಪಳ್ಳಿಯ ಕವಿಮನೆ ಹತ್ತಿರವೇ ಇರುವ ಸಿಬ್ಬಲ್ ಗುಡ್ಡ ಎಂಬ ಪ್ರದೇಶದಲ್ಲೇ, ಕುವೆಂಪು ಅವರು ಜನಪ್ರಿಯ ಗೀತೆ ದೇವರು ರುಜು ಮಾಡಿದನು ಎಂಬ ಪದ್ಯವನ್ನು ಬರೆದಿದ್ದು, ಇಲ್ಲಿಂದ ಸೂರ್ಯಾಸ್ತ ಮತ್ತು ಸೂರ್ಯೋದಯದ ವಿಹಂಗಮ ನೋಟವನ್ನು ಕಾಣಬಹುದು.

ಹೀಗಾಗಿ ಜೀವನದಲ್ಲಿ ಒಮ್ಮೆಯಾದರೂ ಕುಪ್ಪಳ್ಳಿಗೆ ಭೇಟಿ ನೀಡಿ ಕುವೆಂಪು ಅವರ ಜೀವನ ಶೈಲಿ, ಮಲೆನಾಡಿನ ಸುಂದರ ಪರಿಸರವನ್ನು ಅನುಭವಿಸುವುದರ ಜತೆಗೆ ಅಲ್ಲಿನ ಸಾಹಿತ್ಯದ ಕುರಿತು ಜ್ಞಾನ ಪಡೆಯಿರಿ.

CS Scanned with CamScanner